

**ಕಾಶ್ಮೀರ ಕಣಿವೆಯ ಎರಡನೇ ದೊಡ್ಡ ಸರೋವರ ಎನ್ನುವ ಪ್ರಸಿದ್ಧಿಗೆ ಪಾತ್ರವಾದ** 'ದಾಲ್ ಲೇಕ್' ಪ್ರವಾಸಿಗರ ಆಕರ್ಷಣೆಯ ಕೇಂದ್ರಗಳಲ್ಲೊಂದು. ಈಗ ದಾಲ್ ಪರಿಸರದಲ್ಲಿ ನೀರವ ಮೌನ. ಕೊರೊನಾ ಕಾರಣದಿಂದಾಗಿ ದೇಶವ್ಯಾಪಿ ಜಾರಿಯಲ್ಲಿರುವ ನಿರ್ಬಂಧ ಸರೋವರದ ಕನ್ನಡಿಯಲ್ಲೂ ಪ್ರತಿಫಲಿಸುತ್ತಿರುವಂತಿದೆ. ಲಾಕ್ ಡೌನ್ ಸಂದರ್ಭದಲ್ಲೂ ವ್ಯಕ್ತಿಯೊಬ್ಬ ದೋಣಿಯಲ್ಲಿ ಕುಳಿತು ಮೀನು ಹಿಡಿಯಲು ಪ್ರಯತ್ನಿಸುತ್ತಿರುವ ಈ ಚಿತ್ರ, ಪ್ರಸಕ್ತ ಸಂದರ್ಭದ ಬಿಕ್ಕಟ್ಟು ಹಾಗೂ ಪ್ರಕೃತಿ–ಮನುಷ್ಯನ ಸಂಬಂಧ ಸೇರಿದಂತೆ ಹಲವು ಅರ್ಥಗಳನ್ನು ಒಮ್ಮೆಗೇ ಸ್ಫುರಿಸುವ ಕಾವ್ಯದಂತಿದೆ.

ಚಿತ್ರ: ತೌಸೀಫ್ ಮುಸ್ತಾಫ / ಎಎಫ್‌ಪಿ.